UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Thursday
26-11-2026

S-karnataka pg 04

ರೇಷ್ಮೆ ಗೂಡು ಭರ್ಜರಿ 835ಕ್ಕೆ ಮಾರಾಟ: ಬೆಳೆಗಾರರಲ್ಲಿ ಹರ್ಷ

ಸಂ.ಕ.ಸಮಾಚಾರ, ವಿಜಯಪುರ

ಮೋಡ ಮುಸುಕಿದ ವಾತಾವರಣ, ತೀವ್ರ ಬರಗಾಲದ ಛಾಯೆ. ಕೊಳವೆಬಾವಿಗಳಲ್ಲಿ ನೀರಿನ ಕೊರತೆ. ಆದರೂ ರೇಷ್ಮೆ ಬೆಳೆಗಾರರ ಮುಖದಲ್ಲಿ ಈಗ ಮಂದಹಾಸ ಮೂಡಿದೆ. ಕಾರಣ, ರೇಷ್ಮೆ ಗೂಡಿಗೆ ಪ್ರತಿ ಕೆಜಿಗೆ 835 ದರ ಸಿಕ್ಕಿರುವುದು.

ರೇಷ್ಮೆ ಗೂಡುಮಾರುಕಟ್ಟೆಯಲ್ಲಿ ಗೂಡಿಗೆ ಉತ್ತಮ ಬೆಲೆ ದೊರೆತಿರುವುದು ಬೆಳೆಗಾರರಿಗೆ ದೊಡ್ಡ ನಿರಾಳತೆ ತಂದಿದೆ. ಕಳೆದ ಕೆಲವು ತಿಂಗಳುಗಳಿಂದ ಬೆಲೆ ಏರಿಳಿತದಿಂದ ಕಂಗೆಟ್ಟಿದ್ದ ರೈತರು, ಈಗ ಸಿಕ್ಕಿರುವ ದರದಿಂದ ಕೊಂಚ ಸಮಾಧಾನಗೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮೋಡ ಮುಸುಕಿದ ವಾತಾವರಣ ಮುಂದುವರಿದಿದೆ. ಬಿಸಿಲು ಸರಿಯಾಗಿ ಬೀಳದ ಕಾರಣ ಗೂಡು ಒಣಗಿಸಲು ಹಾಗೂ ನೂಲು ಬಿಚ್ಚಾಣಿಕೆ ಮಾಡಲು ಕಷ್ಟವಾಗುತ್ತಿದೆ. ಗೂಡು ತೇವಾಂಶದಿಂದ ಕೂಡಿದ್ದರೆ ನೂಲಿನ ಗುಣಮಟ್ಟ ಕುಂಠಿತವಾಗುವ ಭಯವೂ ಇದೆ. ಆದರೂ ರೈತರು, ಚಂದ್ರಿಕೆಗಳನ್ನು ಸಂಗ್ರಹಿಸಿಟ್ಟಿರುವ ಮನೆಗಳಲ್ಲಿ ಶಾಖವನ್ನು ಹೆಚ್ಚಿಸುವಂತಹ ಪ್ರಯತ್ನ ಮಾಡಿ, ಗೂಡು ಗುಣಮಟ್ಟದಲ್ಲಿರುವಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಹವಾಮಾನ ವೈಪರೀತ್ಯವಿದ್ದರೂ ಬೆಲೆ ಚೆನ್ನಾಗಿ ಸಿಕ್ಕಿರುವುದು ನಮಗೆ ಧೈರ್ಯ ತಂದಿದೆ ಎನ್ನುವುದು ಬೆಳೆಗಾರರ ಮಾತು.

ಉತ್ತಮ ಬೆಳೆ ಬಂದಿರುವುದು ಇತರೆ ರೈತರಿಗೂ ಪ್ರೋತ್ಸಾಹ ನೀಡಿದಂತಾಗಿದೆ. ನೀರಿನ ಕೊರತೆ ಇದ್ದರೂ ರೇಷ್ಮೆ ಬೆಳೆ ಕೈಹಿಡಿಯುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಗಿದ್ದು, ಈ ಬೆಳೆಯಿಂದ ವಿಮುಖರಾಗಿರುವ ರೈತರು ಪುನಃ ರೇಷ್ಮೆಯ ಕಡೆಗೆ ಬಂದರೆ, ಆರ್ಥಿಕ ಸುಧಾರಣೆ ಕಾಣಬಹುದಾಗಿದೆ ಎಂದು ಹಿರಿಯ ರೈತ ಮುನಿಕೃಷ್ಣಪ್ಪ ಅಭಿಪ್ರಾಯಪಟ್ಟರು.



ಕೃಷಿ ಹವಾಮಾನ ಸಮ್ಮೇಳನ ಇಂದಿನಿಂದ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಗುಜರಾತಿನ ಆನಂದ್‌ನಲ್ಲಿರುವ ಕೃಷಿ ಹವಾಮಾನ ಶಾಸ್ತ್ರಜ್ಞರ ಸಂಘದ ಜಂಟಿ ಆಶ್ರಯದಲ್ಲಿ ಡಿಜಿಟಲ್ ಕೃಷಿಗಾಗಿ ಕೃಷಿ ಹವಾಮಾನ ಬುದ್ಧಿಮತ್ತೆ ಕುರಿತ ಜಾಗತಿಕ ಮಟ್ಟದ ಸಮ್ಮೇಳನ ಗುರುವಾರದಿಂದ (ನ.26- 28) ಜಿಕೆವಿಕೆಯಲ್ಲಿ ನಡೆಯಲಿದೆ. ಡಿಜಿಟಲ್ ತಂತ್ರಜ್ಞಾನ ಮತ್ತು ಬುದ್ಧಿಮತ್ತೆ ಆಧಾರಿತ ಪರಿಹಾರದ ಮೂಲಕ ಕೃಷಿ ಕ್ಷೇತ್ರವನ್ನು ಪರಿವರ್ತಿಸುವಲ್ಲಿ ಕೃಷಿ ಹವಾಮಾನಶಾಸ್ತ್ರದ ಪಾತ್ರದ ಕುರಿತು ಚರ್ಚಿಸಲು ದೇಶ-ವಿದೇಶಗಳ ವಿಜ್ಞಾನಿಗಳು, ಸಂಶೋಧಕರು, ಶಿಕ್ಷಣ ತಜ್ಞರು ಭಾಗವಹಿಸಲಿದ್ದಾರೆ.

Vijayavani pg 09

ಡಿ.7ರವರೆಗೆ ಆಯೋಜನೆ | ತುಂತುರು ಹನಿಗಳ ಮಧ್ಯೆ ಜನಮನ ಗೆದ್ದ ಪ್ರದರ್ಶನ

ಕಬ್ಬನ್ ಪಾರ್ಕ್‌ನಲ್ಲಿ ಹೂಗಳ ಹಬ್ಬ

ಬೆಂಗಳೂರು: ನಗರದ ಕಬ್ಬನ್ ಉದ್ಯಾನದಲ್ಲಿ 13 ದಿನಗಳ 'ಹೂಗಳ ಹಬ್ಬ'ಕ್ಕೆ ಬುಧವಾರ ಚಾಲನೆ ದೊರೆತಿದ್ದು, ವಿವಿಧ ಬಗೆಯ ಹೂಗಳಿಂದ ನಿರ್ಮಾಣಗೊಂಡಿರುವ ಕಲಾಕೃತಿಗಳು ನೋಡುಗರ ಗಮನ ಸೆಳೆಯುತ್ತಿವೆ.

ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಪ್ರಯುಕ್ತ ತೋಟಗಾರಿಕಾ ಇಲಾಖೆ ಆಯೋಜಿಸಿರುವ ಈ ಹಬ್ಬದಲ್ಲಿ ಬಣ್ಣ ಬಣ್ಣದ ಹೂಗಳಿಂದ ನಿರ್ಮಿಸಲಾದ ಇಂಡಿಯಾ ಗೇಟ್, ಇತ್ತೀಚೆಗೆ ಆರಂಭವಾದ ಗುಲಾಬಿ ಮಾರ್ಗದ ಮೆಟ್ರೋ ರೈಲು ಮಾದರಿ, ಭುವನೇಶ್ವರಿದೇವಿ ಪ್ರತಿಮೆ, ಕರ್ನಾಟಕ ಭೂಪಟ, ಗಂಡಭೇರುಂಡ ಲಾಂಛನ ಆಕರ್ಷಕವಾಗಿವೆ. ತುಂತುರು ಮಳೆ ಹನಿಯ ನಡುವೆ ಪ್ರದರ್ಶನದ ಸೊಬಗನ್ನು ವೀಕ್ಷಕರು ಕಣ್ತುಂಬಿಕೊಂಡು ಹಿಗ್ಗಿದರು.

ಮತ್ತೊಂದೆಡೆ, ಹಸಿರು ಹಾಗೂ ಕೆಂಪು ಬಣ್ಣದ ಕ್ಯಾಪ್ಸಿಕಂಗಳಿಂದ ತಯಾರಿಸಲಾಗಿರುವ ದಸರಾದ ಅಂಬಾರಿ ಆನೆ, ಬಿಳಿ, ಹಳದಿ, ಕೆಂಪು ಹೂವುಗಳಿಂದ ನಿರ್ಮಿಸಲಾದ ಚಿಟ್ಟೆ, ಹೂವುಗಳ ಆನೆ, ಚಿಟ್ಟೆ ಹಾಗೂ ಮಕ್ಕಳನ್ನು ಆಕರ್ಷಿಸುವ ನರ್ತಿಸುವ ನವಿಲು, ಪಾಂಡಾ, ಸ್ವಾರ್‌ಫಿಶ್ ಸೇರಿ ಹಲವು ಕಲಾಕೃತಿಗಳು ಚಿಣ್ಣರನ್ನು ಬರಸೆಳೆದವು. ಕನ್ನಡ ನಾಡಿನ ವೀರ ವನಿತೆಯರನ್ನು ಪರಿಚಯಿಸುವ ಅರ್ಧ ಚಂದ್ರಾಕೃತಿಯ ಸಸ್ಯೋದ್ಯಾನದ್ದು ಮತ್ತೊಂದು ಸೊಬಗು.

ಸುಮಾರು 15 ಲಕ್ಷಕ್ಕೂ ಅಧಿಕ ಕಟ್ ಫ್ಲವರ್ಸ್ ಮತ್ತು 1.25 ಲಕ್ಷ ಅಲಂಕಾರಿಕ ಹೂವಿನ ಕುಂಡಗಳನ್ನು ಬಳಸಿ ಫೌಂಟೇನ್ ವೃತ್ತದಿಂದ ಬ್ಯಾಂಡ್‌ಸ್ಟ್ಯಾಂಡ್ ಮಾರ್ಗವಾಗಿ



ವಿಜಯವಾಣಿ ಚಿತ್ರಗಳು

ನಗರದ ಕಬ್ಬನ್ ಉದ್ಯಾನದಲ್ಲಿ ಏರ್ಪಡಿಸಿರುವ 'ಹೂಗಳ ಹಬ್ಬ'ಕ್ಕೆ ಡಾ. ಆರ್. ಗಿರೀಶ್ ಚಾಲನೆ ನೀಡಿದರು. ಆಯೋಜಕರು, ಹಿರಿಯ ಅಧಿಕಾರಿಗಳಿದ್ದರು.

ಬಾಲಭವನದವರೆಗೆ ಬಣ್ಣಬಣ್ಣದ ಹೂಗಳ ಲೋಕವೇ ಅನಾವರಣಗೊಂಡಿರುವುದು ಗಮನಾರ್ಹ. ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದ ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಡಾ. ಆರ್. ಗಿರೀಶ್ ಮಾತನಾಡಿ, ಪ್ರದರ್ಶನಕ್ಕಾಗಿ ಸುಮಾರು 1.25 ಲಕ್ಷ ಹೂ ಕುಂಡಗಳನ್ನು ಸಜ್ಜುಗೊಳಿಸಿದ್ದು, ಚೀನಾದಿಂದ ಆಮದು ಮಾಡಿಕೊಂಡಿರುವ ಪೈಥರ್ಷ್ ಸಸ್ಯ, ಬೋನ್ಸಾಯಿ ಗಾರ್ಡನ್ ಹಾಗೂ ಹೂವುಗಳ ಕಲಾಕೃತಿಗಳು ಆಕರ್ಷಕವಾಗಿದ್ದು, ಡಿ. 7ರವರೆಗೆ ನಡೆಯುವ ಪ್ರದರ್ಶನದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.



ಹೂಗಳ ಹಬ್ಬದಲ್ಲಿ ಪಾಲ್ಗೊಂಡು ಸಂಭ್ರಮಿಸಿದ ಜನರು.



ಆಂಬಾರಿ ಹೊತ್ತ ಆನೆ.



ಮಗುವಿಗೆ ತಾಯಿಯಿಂದ ಪ್ರೀತಿಯ ತುತ್ತು.

Vijayavani pg 09



Flower power: Visitors during the inauguration of Hoogala Habba 2026, a 13-day flower festival organised by the Department of Horticulture at Cubbon Park in Bengaluru on Wednesday. K. MURALI KUMAR

Flower show blooms at Cubbon Park

The Hindu Bureau
BENGALURU

As the 5th flower show in Cubbon Park began on Wednesday, hundreds of visitors and schoolchildren flocked to see the floral models of Bhuvaneshwari, a replica of the Karnataka map, Hoysala architecture, a replica of India Gate, and more. Themed around Karnataka Rajyotsava, the Horticulture Department organised a separate display featuring photographs of women freedom fighters surrounded by colourful flowers. It included Kittur Rani Chennamma, Rani Abbakka Chowta, Maharani Kempananjammanni Devi and others.

More than 100 stalls have been set up, selling various items, including clothes, chocolates, Channapatna toys, and varieties of plants.

The entry fee for the show is ₹50 for adults and ₹20 for children under 12 on weekdays, and ₹80 for adults and ₹20 for children on weekends. Entry is free for children who visit the park in school uniform and carry their ID cards.

Pay-and-park facilities for visitors have been arranged near NGO Circle, Queen's Park, the High Court, Sree Kanteerava Stadium, and St. Joseph's School.

The show will conclude on December 7.

Hindu pg 04

ರೈತರ ಬರ ಪರಿಹಾರ ಪರಿಷ್ಕರಿಸಿ ಆದೇಶ

ಬೆಂಗಳೂರು: ರಾಜ್ಯದಲ್ಲಿ ತಲೆದೋರಿರುವ ತೀವ್ರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತರ ನೆರವಿಗೆ ಧಾವಿಸಿರುವ ಸರ್ಕಾರ, ಬೆಳೆ ಹಾನಿ ಪರಿಹಾರದ (ಇನ್‌ಪುಟ್ ಸಬ್ಸಿಡಿ) ದರಗಳನ್ನು ಪರಿಷ್ಕರಿಸಿದೆ. ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ಮಾರ್ಗಸೂಚಿಗಳ ಅನ್ವಯ, ಶೇ.33ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಹಾನಿಗೊಳಗಾದ ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಹೆಚ್ಚಿನ ಪರಿಹಾರ ಧನವನ್ನು ನಿಗದಿಪಡಿಸಲಾಗಿದೆ.

■ ಬೆಳೆ ಪರಿಹಾರದ ಇನ್‌ಪುಟ್ ಸಬ್ಸಿಡಿ ದರ ಪರಿಷ್ಕರಣೆ

ಪರಿಷ್ಕೃತ ದರಗಳು (ಪ್ರತಿ ಹೆಕ್ಟೇರ್‌ಗೆ)

ಬೆಳೆ ಮಾದರಿ	ಹಿಂದಿನ ಮೊತ್ತ (ರೂ.ಗಳಲ್ಲಿ)	ಪರಿಷ್ಕೃತ ಮೊತ್ತ (ರೂ.ಗಳಲ್ಲಿ)
ಮಳೆಯಾಶ್ರಿತ	8,500	11,000
ನೀರಾವರಿ	17,000	22,000
ಬಹುವಾರ್ಷಿಕ	22,500	30,000

226 ತಾಲೂಕುಗಳು ಬರ ಪೀಡಿತ

ಕೇಂದ್ರ ಕೃಷಿ ಮಂತ್ರಾಲಯದ ಬರ ನಿರ್ವಹಣೆ ಕೈಪಿಡಿ-2020ರ ಅನ್ವಯ, ಜಿಲ್ಲಾಧಿಕಾರಿಗಳಿಂದ ಪಡೆದ ಕ್ಷೇತ್ರ ಪರಿಶೀಲನೆ ವರದಿ ಹಾಗೂ ಬೆಳೆ ಸಮೀಕ್ಷೆಯ ದೃಢೀಕರಣದ ಆಧಾರದ ಮೇಲೆ ರಾಜ್ಯದ ಒಟ್ಟು 240 ತಾಲೂಕುಗಳ ಪೈಕಿ 226 ತಾಲೂಕುಗಳನ್ನು ಬರ ಪೀಡಿತ ತಾಲೂಕುಗಳೆಂದು ಸರ್ಕಾರ ಘೋಷಿಸಿದೆ. ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಗಳ ಜಂಟಿ ಸಮೀಕ್ಷೆಯ ಪ್ರಕಾರ, ರಾಜ್ಯದಲ್ಲಿ ಒಟ್ಟು 57.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇ. 33ಕ್ಕಿಂತ ಹೆಚ್ಚಿನ ಬೆಳೆ ಹಾನಿಯಾಗಿದೆ.

Vijayavani pg 09

ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸಿ

Vijayavani pg 10



ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ರೈತ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಪ್ರತಿಭಟಿಸಿದರು.

ಬೆಂಗಳೂರು: ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸಬೇಕು, ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಸರ್ಕಾರ ಕ್ರಮವಹಿಸಬೇಕು ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನವದಲ್ಲಿ ಅಖಿಲ ಕರ್ನಾಟಕ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು.

■ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಕೋಳಿ ಸಾಕಾಣಿಕೆಯೂ ರೈತರ ಪ್ರಧಾನ ಕಸುಬು ಆಗಿದೆ. ಹೈನೋದ್ಯಮ ವ್ಯಾಪ್ತಿಗೆ ಒಳಪಡಿಸಿಕೊಂಡು ಬರಲಾಗಿದ್ದು, ಬ್ಯಾಂಕ್ ಅಧಿಕಾರಿಗಳು, ಕೆಲ ಸರ್ಕಾರಿ ಅಧಿಕಾರಿಗಳು ವಾಣಿಜ್ಯ ಉದ್ದಿಮೆ ವ್ಯಾಪ್ತಿಗೆ ಒಳಪಡಿಸಿದ್ದಾರೆ. ಇದರಿಂದ ಸಾಕಣೆದಾರರಿಗೆ ತೀವ್ರ ಹೊರೆಯಾಗಿದೆ ಎಂದು ಹೇಳಿದರು.

ವಿದ್ಯುತ್‌ಗೆ ವಾಣಿಜ್ಯ ಶುಲ್ಕ, ಔಷಧ, ಆಹಾರ ಬೆಲೆ ಏರಿಕೆಯಾಗಿದೆ. ಇದರ ಬೆಲೆ ನಿಗದಿಯನ್ನು ಕಂಪನಿಗಳೇ ನಿರ್ಧರಿಸುತ್ತಿವೆ. ಇದರಿಂದ ಬರುವ ಲಾಭದ ಮೊತ್ತ ಕಂಪನಿಗಳಿಗೆ ಪಾವತಿ ಮಾಡಲಾಗುತ್ತಿದೆ. ಬೆಲೆ ನಿಯಂತ್ರಣ ಮಾಡಲು ಸರ್ಕಾರ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಕನಿಷ್ಠ ಸಾಕಾಣಿಕೆ ವೆಚ್ಚವಾಗಿ ಪ್ರತಿ ಕೆ.ಜಿ.ಗೆ 10 ರೂ. ನಿಗದಿಪಡಿಸಲು ಸರ್ಕಾರ ಆದೇಶಿಸಿದೆ. ಆದರೆ ಇದನ್ನು ಕಂಪನಿಗಳು ಪಾಲನೆ ಮಾಡುತ್ತಿಲ್ಲ. ಈ ಕುರಿತು ಇಂಟಿಗ್ರೇಷನ್ ಕಂಪನಿಗಳಿಗೆ ಸರ್ಕಾರ ಸೂಕ್ತ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕೆ ವಿಧಾನಪರಿಷತ್ ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಭೇಟಿ ನೀಡಿ ರೈತರ ಮನವಿಗೆ ಸ್ಪಂದಿಸಿ ಸದನದಲ್ಲಿ ಧ್ವನಿ ಎತ್ತುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಶಾಸಕ ರವಿಕುಮಾರ್, ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್, ಗೌರವಾಧ್ಯಕ್ಷ ಮಾರಣ್ಣ, ಉಪಾಧ್ಯಕ್ಷ ಧನಂಜಯ್, ಮುಖಂಡರಾದ ಟಿ. ಯಶವಂತ, ವೆಂಕಟರೆಡ್ಡಿ, ಶ್ರೀಧರ್ ರೆಡ್ಡಿ, ರಾಜ್‌ಕುಮಾರ್, ನಿತಿನ್, ಸುಧಾಕರ್ ಮತ್ತಿತರರಿದ್ದರು.

Hindu pg 05

Agriculture status sought for poultry farming

BENGALURU, DHNS: Poultry farmers from across the state staged a protest at the Freedom Park on Wednesday. This is the second such protest within a month.

The Karnataka State Poultry Farmers' Welfare and Development Association and the Akhila Karnataka State Poultry Farmers' Welfare and Development Association have also written to the chief minister demanding that the order providing Rs 10 rearing cost per kg be implemented immediately.

According to the poultry farmers, a Rs 10 per kg rearing cost was fixed by the government and an order was passed nearly six months ago. However, the order has not been implemented on the ground and this has resulted in huge losses to the farmers, they said.

"Though poultry farming is growing in the state and provides many job opportunities and huge business opportunities, the poultry farmers are still struggling to make ends meet. Many of us are struggling to repay loans and are on the verge of bankruptcy," the Association said in a statement. They also demanded that the Karnataka Poultry Regulation and Development Bill, 2022, should be passed during the winter session of the legislature.

"Poultry farming should be recognised as agriculture and suitable amendments should be made to Section 95(1)(a) of the Karnataka Land Revenue Act, 1964, treating poultry farming as an agricultural activity," the letter said.